ಹೇಳಲಿಲ್ಲ, ಬಾಂಬೆ ಬ್ಲಾಸ್ಟ್ ಬಗ್ಗೆ, ನಕಲಿ ನೋಟುಗಳ ಪತ್ತೆ ಬಗ್ಗೆ, ಸ್ಟ್ಯಾಂಪ್ ಪೇಪರ್ ಬಗ್ಗೆ, ಹಳೆಯ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದನ್ನು ಪತ್ತೆ ಹಚ್ಚಿದ್ದು ಹೀಗೆ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿದ್ದರ ಬಗ್ಗೆ ಯಾರೂ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಎಲ್ಲಾ ವಿಚಾರಗಳಲ್ಲೂ ಕೆಲವರು ಎಡಿಟೋರಿಯಲ್ ಬರೆದು ಸ್ವಾಗತ ಮಾಡಿದ್ದಾರೆ, ಏಕೆ ನೀವು ಹೀಗೆ ಹೇಳುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಅವರಿಗೆ ಹೇಳಲಿಲ್ಲ, ಹೊಗಳಲಿಲ್ಲವೆಂದು ನಿಮಗೆ ಹೇಳಿದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮೊನ್ನೆ ಬೆಂಗಳೂರಿನಲ್ಲಿ ಕೊಲೆಯಾಯಿತು ನೀವು ಆ ಸ್ಥಳಕ್ಕೆ ಒಂದು ಸಾರಿ ಹೋಗಿದಿದ್ದರೆ ರೈಟ್ ಸಿಗ್ನಲ್ ಹೋಗುತ್ತಿತ್ತು, ಅಧಿಕಾರಿಗಳಿಗೂ ಕೂಡ ಒಂದು ಎಚ್ಚರಿಕೆ ಬರುತ್ತಿತ್ತು, ಇದು ನನ್ನ ಅನಿಸಿಕೆ, ಅದನ್ನು ನೀವು ಒಪ್ಪಿಕೊಳ್ಳದಿರಬಹುದು. ಮತ್ತೆ ಪೋಲಿಸ್ ಉನ್ನತಾಧಿಕಾರಿಗಳಲ್ಲಿ ಏನು ಗುಂಪುಗಾರಿಕೆ ಇದೆ ಅದರಿಂದ ಇವತ್ತು ಅಪರಾಧ ತಡೆಗಟ್ಟಲು ತೊಂದರೆಯಾಗುತ್ತಿದೆ, ಅದನ್ನು ನಿಲ್ಲಿಸದಿದ್ದರೆ ನಾವೇನು ಇವತ್ತು ಆತಂಕವನ್ನು ವ್ಯಕ್ತಪಡಿಸಿದ್ದೇವೆ ಅದು ನಿಜವಾಗುವ ಪರಿಸ್ಥಿತಿ ಎಲ್ಲಾ ಕಡೆ ಬಂದೇ ಬರುತ್ತದೆ.

(ಅ) ಮೈಸೂರು, ಮಂಡ್ಯ, ಚಾಮರಾಜನಗರದಲ್ಲಿ ಕರಳುಬೇನೆ ಹಬ್ಬುತ್ತಿರುವ ಬಗ್ಗೆ.

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) ಮಾನ್ಯ ಅಧ್ಯಕ್ಷರೆ, ಮೈಸೂರು, ಮಂಡ್ಯ, ಚಾಮರಾಜನಗರ ಈ ಭಾಗದಲ್ಲಿ ಕರಳುಬೇನೆ ಬಂದು ಸುಮಾರು ನಾಲ್ಕೈದು ಜನರು ಸತ್ತಿರುವುದು ವರದಿಯಾಗಿದೆ. ಮೊನ್ನೆ ನಮ್ಮ ಮಳವಳ್ಳಿಯಲ್ಲೂ ಕೂಡ ಹಾವು ಕಡಿದು ಒಬ್ಬರು ಸತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಏನಾಗಿದೆ ಎಂದರೆ ಸರಿಯಾಗಿ ಔಷಧಿಗಳಿಲ್ಲ, ವೈದ್ಯರುಗಳಿಲ್ಲ, ಹೀಗಾಗಿ ಚಿಕಿತ್ಸೆಯನ್ನು ಸರಿಯಾಗಿ ಕೊಡದೆ ಮಳವಳ್ಳಿ ಆಸ್ಪತ್ರೆಯಲ್ಲಿ ಒಬ್ಬರು ಸತ್ತಿದ್ದಾರೆ. ನೀರು ಸರಿಯಾಗಿಲ್ಲದೆ ಅದನ್ನು ಕುಡಿದು ಕರಳುಬೇನೆ ರೋಗದಿಂದ 5-6 ಜನ ಸತ್ತಿರುವುದು ನಾನು ಹೇಳಿದ ಭಾಗಗಳಲ್ಲಿ ಆಗಿದೆ. ಆಸ್ಪತ್ರೆಗಳಲ್ಲಿ ಯಾವುದೇ ರೀತಿಯಾದ ಚಿಕಿತ್ಸೆ ಸಿಗುತ್ತಿಲ್ಲ, ವೈದ್ಯರುಗಳಿಲ್ಲ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಕೊಳ್ಳೆಗಾಲ, ಮಳವಳ್ಳಿ, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಈ ಭಾಗದಲೆಲ್ಲಾ ಅದು ಹಬ್ಬುತ್ತಿದೆ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ನಮ್ಮ, ಚಾಮರಾಜನಗರ ಜಿಲ್ಲೆ ಕಿಸ್ತೂರು ಗ್ರಾಮದಲ್ಲಿ ಕರಳುಬೇನೆ ರೋಗದಿಂದ ಈಗಾಗಲೇ ನಾಲ್ಕು ಜನ ಮೃತರಾಗಿದ್ದಾರೆ. ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆ ಮುಂತಾದ ಅಕ್ಕಪಕ್ಕದ ಗ್ರಾಮಗಳಲ್ಲಿ, ಚಾಮರಾಜನಗರ ತಾಲ್ಲೂಕಿನ ಹರಪನಹಳ್ಳಿ,

ಅರಕಲವಾಡಿ, ಕಾಗಲವಾಡಿ ಗ್ರಾಮಗಳಲ್ಲಿ ಕರಳುಬೇನೆ ಬಂದು ಸುಮಾರು 30 ರಿಂದ 40 ಜನರು ನರಳುತ್ತಿದ್ದಾರೆ. ಹಾಗೆಯೇ ಇದು ಕೊಳ್ಳೆಗಾಲ, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಹಬ್ಬುತ್ತಿದೆ. ಇದರ ಬಗ್ಗೆ ಜಿಲ್ಲಾ ಪರಿಷತ್ ನವರು ಸೂಕ್ತವಾದಂಥ ವ್ಯವಸ್ಥೆಯನ್ನು ಕೈಗೊಳ್ಳದಿರುವುದರಿಂದ ಈ ರೋಗ ಉಲ್ಬಣವಾಗುವಂಥ ಪರಿಸ್ಥಿತಿಯಿದೆ. ಜೊತೆಗೆ ಸರಿಯಾಗಿ ಆರೋಗ್ಯ ತಪಾಸಣೆಯನ್ನು ಮಾಡುವುದಕ್ಕೆ ವೈದ್ಯಕೀಯ ವ್ಯವಸ್ಥೆ ಕೂಡ ಇಲ್ಲದಿರುವುದರಿಂದ ಇದು ಹೆಚ್ಚಾಗುತ್ತಿದೆ. ಕೂಡಲೆ ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಮುಂದಾಗಬೇಕು. ಕುಡಿಯುವ ನೀರು ಶುದ್ಧಗೊಳ್ಳುವ ಸಲುವಾಗಿ ಬ್ಲೀಚಿಂಗ್ ಪೌಡರ್ ಏನು ಹಾಕಬೇಕೋ ಅದನ್ನು ಸಮರ್ಪಕವಾಗಿ ಮಾಡದೇ ಇರುವುದರಿಂದ ಈ ರೋಗ ಕಾಣಿಸಿಕೊಳ್ಳುತ್ತಿದೆ ಜೊತೆಗೆ ನೀರಿನ ಪೈಪಿನೊಳಗೆ ಪಾಚಿ ಕಟ್ಟಿಕೊಂಡಿರುವುದರಿಂದ ಅದನ್ನು ಸರಿಪಡಿಸದೆ ನೀರು ಸರಬರಾಜು ಮಾಡುತ್ತಿರುವುದು ಹಾಗೂ ಒಡೆದು ಹೋಗಿರುವ ಪೈಪಿನೊಳಗೆ ಚರಂಡಿ, ಗಲೀಜು ನೀರು ಸೇರಿ ಅದನ್ನು ಜನರು ಕುಡಿಯುವುದರಿಂದ ಈ ರೋಗಕ್ಕೆ ಕಾರಣವಾಗಿದೆ. ಇದು ಎಲ್ಲೆಲ್ಲಿ ಕಾಣಿಸಿಕೊಂಡಿದೆ ಅಲ್ಲಿಗೆ ತುರ್ತಾಗಿ ಔಷಧಿಯನ್ನು ಕಳುಹಿಸಿ ರೋಗವನ್ನು ತಡೆಗಟ್ಟದಿದ್ದರೆ ಎಲ್ಲಾ ಜಿಲ್ಲೆಯಾದ್ಯಂತ ಹಬ್ಬುವಂಥ ಪರಿಸ್ಥಿತಿ ಉಂಟಾಗುವುದಕ್ಕೆ ಮೊದಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರಳು ಬೇನೆ ರೋಗ ಹಬ್ಬುತ್ತಿದೆ ಮತ್ತು ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂದು ಶ್ರೀಯುತರುಗಳಾದ ಸೋಮಶೇಖರ್ ಮತ್ತು ಮಹದೇವ ಪ್ರಸಾದ್ ಅವರು ಹೇಳಿದರು. ಇದರಲ್ಲಿ 50 ಪರ್ಸೆಂಟ್ ಜವಾಬ್ದಾರಿ ಅವರದ್ದು ಇದೆ ಮತ್ತು 50 ಪರ್ಸೆಂಟ್ ಜವಾಬ್ದಾರಿ ನನ್ನ ಇಲಾಖೆಯದ್ದು ಇದೆ. ಏಕೆಂದರೆ ಸ್ವಚ್ಛ ನೀರನ್ನು ಕೊಡುವಂಥ ವ್ಯವಸ್ಥೆಯನ್ನು ಆರೋಗ್ಯ ಇಲಾಖೆ ಮಾಡುವುದಿಲ್ಲ. ನಗರಸಭೆಯಲ್ಲಿ ಇದ್ದರೆ ನಗರಸಭೆಯವರು ಮಾಡಬೇಕು, ಗ್ರಾಮಾಂತರ ಪ್ರದೇಶದಲ್ಲಿ ಆದರೆ ಜಿಲ್ಲಾಪಂಚಾಯತ್‌ನವರು ಮಾಡುತ್ತಾರೆ. ಜಿಲ್ಲಾಪಂಚಾಯತ್ ನಲ್ಲಿ ಮತ್ತು ನಗರಸಭೆಯಲ್ಲಿ ಕೂಡ ಎಕ್ಸ್-ಆಫಿಶಿಯೋ ಮೆಂಬರ್ ಇರುತ್ತಾರೆ. ಅವರನ್ನು ಸ್ವಲ್ಪ ಕಾರ್ಯೋನ್ಮುಖವಾಗಿ ತಾವು ಮಾಡಬೇಕು. ಇನ್ನು ಆಸ್ಪತ್ರೆಗಳಲ್ಲಿ ಅವ್ಯವಸ್ಥೆ ಇದೆಯೆಂದು ಮಾನ್ಯ ಸದಸ್ಯರು ಹೇಳಿದರು. ಯಾವ ಯಾವ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಯಾವ ಯಾವುದು ಇದೆ ಎಂಬುದನ್ನು ತಾವು ಹೇಳಿದರೆ 24 ಗಂಟೆಯೊಳಗೆ ಯಾವ ಆಸ್ಪತ್ರೆಯಲ್ಲಿ ಔಷಧಿ ಇಲ್ಲ ಅಲ್ಲಿಗೆ ನಾನು ಔಷಧಿಯನ್ನು ರವಾನೆ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೇ, ಅಲ್ಲಿಯ ಜಿಲ್ಲಾ ಪರಿಷತನ್ನವರು ನೀರಿನ ಬಗ್ಗೆ ದೂರು ಹೇಳಿ ಅವರು ತಮ್ಮ ಜವಾಬ್ದಾರಿಯಿಂದ

ನುಣುಚಿಕೊಳ್ಳತ್ತಿದ್ದಾರೆ. ಆದ್ದರಿಂದ ಆರೋಗ್ಯ ಇಲಾಖೆಯವರು ವಿಶೇಷವಾದ ಆಸಕ್ತಿಯನ್ನು ತೆಗೆದುಕೊಂಡು ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕು. ಇಲ್ಲದಿದ್ದರೆ ಅದು ಮಾಮೂಲಿಯ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿರುತ್ತದೆ.

(ಇ) ದಕ್ಷಿಣ ಕನ್ನಡ ಜಿಲ್ಲೆಯ ಸಜಿಪುಮನ್ನೂರು ಗ್ರಾಮದಲ್ಲಿ ಬಾಲಕಿಯು ವಿದ್ಯುತ್ ವೈರ್ ತುಳಿತದಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸಜಿಪುಮನ್ನೂರು ಗ್ರಾಮದಲ್ಲಿ ಸುಮಾರು 7 ವರ್ಷದ ಮರಿಯಮ್ಮ ಯಾನೆ ಮಿಸ್ರಿ ಎಂಬು ಹುಡುಗಿ ಮದರಸದಿಂದ ಮನೆಗೆ ಹೋಗುವಾಗ ದಾರಿಯಲ್ಲಿ ಬಿದ್ದಿದ್ದಂಥ ವಿದ್ಯುತ್ ವೈರ್‌ನ್ನು ತುಳಿದಾಗ ವಿದ್ಯುತ್ ಅಘಾತವಾಗಿ ಇಡೀ ಅರ್ಧ ದೇಹ ಬೆಂದುಹೋಗಿರುತ್ತದೆ. ಈ ಹೈ-ಟೆನ್‌ಷನ್ ವೈರ್ ಏಕೆ ಬಿದ್ದಿರುತ್ತದೆ ಎಂದರೆ 10 ಎಂ.ಎಂ.ದಪ್ಪದ ವೈರ್ ಹಾಕುವ ಬದಲಾಗಿ 6 ಎಂ.ಎಂ. ದಪ್ಪದ ವೈರ್ ಹಾಕಿರುವುದರಿಂದ ವೈರ್ ಕಟ್ಟಾಗಿ ಕೆಳಗೆ ಬಿದ್ದಿದೆ ಎನ್ನುವ ವರದಿ ಇದೆ. ಆ ಹುಡುಗಿಯನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಕೊಡುವಾಗ ಇಡೀ ಬೆಂದ ಬಲಗೈಯನ್ನು ಕತ್ತರಿಸಬೇಕಾಗುತ್ತದೆ. ಎಡಗೈ ಬೆರಳನ್ನು ಈಗಾಗಲೇ ಕತ್ತರಿಸಿದ್ದಾರೆ. ಈ ಹುಡುಗಿಯ ತಂದೆ ಅಬ್ದುಲ್ ರೆಹಮಾನ್ ಎನ್ನುವ ಕಾರು ಚಾಲಕ. ನರಳಾಡುತ್ತಿರುವಂಥ ಈ ಹುಡುಗಿಗೆ ಯಾವುದೇ ರೀತಿಯಲ್ಲಿ ವೈದ್ಯಕೀಯ ನೆರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲದಿರುವಂಥ ಒಬ್ಬ ವ್ಯಕ್ತಿ. ಇಂಥ ಪರಿಸ್ಥಿತಿಯಲ್ಲಿ ನೀವು ನೆರವನ್ನು ಕೊಡಬೇಕೆಂದು ಕೆ.ಪಿ.ಟಿ.ಸಿ.ಎಲ್.ರವರನ್ನು ವಿಚಾರಿಸಿದಾಗ ಅಲ್ಲಿಂದ ಈ ಹುಡುಗಿಯ ವೈದ್ಯಕೀಯ ಖರ್ಚಿನ ಸಲುವಾಗಿ ಬಂದಿರುವುದು ಕೇವಲ 27 ಸಾವಿರ ರೂ.ಗಳು ಮಾತ್ರ. ಮುಖ್ಯಮಂತ್ರಿಗಳ ಪರಿಹಾರಧನದಿಂದ ರೂ. 10 ಸಾವಿರ ಬಂತು. ವೈದ್ಯಕೀಯ ಖರ್ಚಿನ ಸಂಬಂಧ ಸುಮಾರು ರೂ. 2 ಲಕ್ಷದಷ್ಟಕ್ಕೆ ಬಿಲ್ ಬಂದಿದೆ. ಆದರೆ ಯಾವುದೇ ನೆರವನ್ನು ಕೊಡುವ ದೃಷ್ಟಿಯಿಂದ ಕೆ.ಪಿ.ಟಿ.ಸಿ.ಎಲ್. ಮುಂದಾಗಿಲ್ಲ. ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ- ದಿವಸಕ್ಕೆ ಮೂರು ಅಕ್ಸಿಡೆಂಟ್‌ಗಳು ಆಗುತ್ತದೆ, ನಾವು ಎಷ್ಟು ಜನರಿಗೆ ಪರಿಹಾರ ಕೊಡುವುದು, ಯಾವ ರೀತಿ ಕೊಡಬಹುದು, ನಮ್ಮ ಕಾನೂನಿನ ನಿಬಂಧನೆಯಲ್ಲಿ ನಮ್ಮಲ್ಲಿಂದ ಪರಿಹಾರ ಕೊಡುವ ಪ್ರಾವಿಜನ್ ಇಲ್ಲ ಎಂದು ಹೇಳುವಂಥ ಮಾತನ್ನು ಆಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ ಇದೆ. ಆದರ ಪ್ರಮುಖರನ್ನು ಸಂಪರ್ಕ ಮಾಡಿದಾಗ ನಾವು ಪರಿಶೀಲಿಸುತ್ತೇವೆಂದು ಹೇಳಿದರು. ಆದರ ನಂತರ ಅವರಿಂದ ನನಗೆ ಒಂದು ಪತ್ರ ಬಂದಿದ್ದು ಅದು ಹೀಗಿದೆ.